

ಕರುಣಾಳು ಬಾ ಬೆಳಕೇ...
ಕಾರ್ಯಾಚರಣೆ ಸ್ಥಳದಲ್ಲಿ
ನೆರೆದಿದ್ದ ಸ್ಥಳೀಯರ ಪ್ರಾರ್ಥನೆ

ಎರಡು ತಾಸುಗಳ ಅನ್ವೇಷಣೆಯ ನಂತರ ಇನ್ನೇನು ವಾಪಸ್ ಹೊರಡಬೇಕೆನ್ನುವಷ್ಟರಲ್ಲಿ ಇವರು ಸಾಗಿಬಂದ ಹಾದಿಯೆಲ್ಲ ನೀರಿನಿಂದ ಮುಳುಗಿತ್ತು. ವಿಪರೀತ ಮಳೆಯಿಂದಾಗಿ ಗುಹೆಯ ಪಕ್ಕದ ಗುಡ್ಡದ ಮೇಲಿನ ನೀರು ಹಠಾತ್ ನುಗ್ಗಿದ್ದರಿಂದ ಗುಹೆಯ ಬಾಯಿ ನೀರು ಮತ್ತು ಕೆಸರಿನಿಂದ ಮುಚ್ಚಿಹೋಗಿತ್ತು. ನೀರಿನ ಪ್ರವಾಹ ಇದ್ದಕ್ಕಿದ್ದಂತೆ ನುಗ್ಗಿ ಅಷ್ಟೂ ಜನರನ್ನು ಗುಹೆಯ ಒಳಗೆ ಕೂಡಿಹಾಕಿಬಿಟ್ಟಿತು.

ಹತ್ತು ಕಿಲೋಮೀಟರ್ ಉದ್ದದ ಗುಹೆ ಅದು. ಸೆಳೆತಕ್ಕೆ ಸಿಕ್ಕ ಅಷ್ಟೂ ಜನ ನಾಲ್ಕು ಕಿ.ಮೀ. ದೂರದವರೆಗೆ ಸಾಗಿ ಅಲ್ಲಿ ಸಿಕ್ಕ ದಾರಿ ಮಧ್ಯದ ಬಂಡೆಯೇರಿ ಕುಳಿತುಬಿಟ್ಟರು. ಕುಡಿಯಲು ನೀರಿಲ್ಲ, ತಿನ್ನಲು ತಿನಿಸುಗಳಿಲ್ಲ. ಗುಹೆಯ ಗೋಡೆಯ ಕಲ್ಲುಗಳ ಸಂದಿಯಿಂದೊಸರುವ ನೀರೇ ಆಹಾರ.

ಕೋಚ್ ಎಕ್ಕಪೊಲ್ ಅಕ್ಕೆಚಾಂಟ್‌ವಾಂಗ್ ಫುಟ್‌ಬಾಲ್ ತರಬೇತುದಾರನಾಗುವುದಕ್ಕಿಂತ ಮುಂಚೆ ಸನ್ಯಾಸಿಯಾಗಿದ್ದ. ಆತನಿಗೆ ಧ್ಯಾನ ಮಾಡುವುದು, ಕಲಿಸುವುದು ತಿಳಿದಿತ್ತು. ಆತಂಕದಲ್ಲಿದ್ದ ಶಿಷ್ಯರನ್ನು ಒಟ್ಟಿಗೆ ಸೇರಿಸಿ, 'ನಾವೆಲ್ಲ ವೃಥಾ ಶ್ರಮಪಟ್ಟು ದೇಹದ ಶಕ್ತಿ ಕಡಿಮೆ ಮಾಡಿಕೊಳ್ಳುವುದು ಬೇಡ, ಯಾರಾದರೂ ನಮ್ಮನ್ನು ರಕ್ಷಿಸಲು ಬಂದೇಬರುತ್ತಾರೆ, ಅಲ್ಲಿಯವರೆಗೂ ಧ್ಯಾನ ಮಾಡುತ್ತಾ ಇರೋಣ' ಎಂದು ಸಮಾಧಾನ ಮಾಡಿ ಧ್ಯಾನ ಶುರುಮಾಡಿಸಿದ.

ಇತ್ತ ಸಂಜೆಯಾದರೂ ಮಕ್ಕಳು ಮನೆಗೆ ಮರಳದ್ದನ್ನು ಕಂಡ ತಂದೆ–ತಾಯಂದಿರು ಸ್ಥಳೀಯ ಪೊಲೀಸರಿಗೆ ದೂರು ಕೊಟ್ಟರು. ಸಮಯ ಸಿಕ್ಕಾಗಲೆಲ್ಲ ಗುಹೆಯ ಬಳಿ ಹೋಗುತ್ತಾರೆ ಎಂದು ಗೊತ್ತಿದ್ದ ಕೆಲವು ಪೋಷಕರು ಪೊಲೀಸರಿಗೆ ಆ ವಿಷಯ ತಿಳಿಸಿದರು. ಅವರು ಎಣಿಸಿದಂತೆ ಜಾಡು ಹಿಡಿದು ಬಂದ ಪೊಲೀಸರಿಗೆ ಗುಹೆಯ ಬಾಗಿಲಿನಲ್ಲಿ ನಿಂತಿದ್ದ ಸೈಕಲ್‌ಗಳು ಅವರೆಲ್ಲ ಒಳಗಿರಬಹುದೆಂಬ ಸುಳಿವು ನೀಡಿದವು. ಕೂಡಲೇ ಕಾರ್ಯಸನ್ನದ್ಧವಾದ ಥಾಯ್ಲೆಂಡ್ ಸರ್ಕಾರ ತನ್ನ ನೌಕಾದಳದ ತಜ್ಞ ಈಜುಗಾರರು ಮತ್ತು ಪೊಲೀಸ್ ನಾಯಿಗಳೊಂದಿಗೆ

## ಸಮೀರ್ ಕರಿಂಬನ ಸ್ವಯಂಸೇವೆ

ಉತ್ತರಕಾಶಿ ಸುರಂಗದಲ್ಲಿ ಸಿಕ್ಕಿಹಾಕಿಕೊಂಡಿದ್ದ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತೆಗೆಯಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಹಲವು ರಕ್ಷಣಾ ತಂಡಗಳು ಒಂದೆಡೆ ಕೆಲಸ ಮಾಡುತ್ತಿರುವಾಗ, ಅವರಿಗೆ ಕೆಲಸದ ನಡುವೆ ಬೇಕಾಗುತ್ತಿದ್ದ ನೀರು, ಚಹಾ, ಕಂಬಳಿಗಳನ್ನು ತುರ್ತಾಗಿ ಅವರಿದ್ದಲ್ಲಿಗೆ ಸಪ್ಲೈ ಮಾಡುತ್ತಿದ್ದ ಅನಾಮಿಕ ಸ್ವಯಂಸೇವಕನ ಹೆಸರು ಸಮೀರ್ ಕರಿಂಬ.

ಕೇರಳದ ಪಾಲಕ್ಕಾಡಿನ ಕರಿಂಬ ಹಳ್ಳಿಯ ಸಮೀರ, ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರನ್ನು ರಕ್ಷಿಸಲು ರಕ್ಷಣಾ ತಂಡಗಳು ಬಂದ ಮರುದಿನವೇ ಸೇವೆಗೆ ಹಾಜರಾಗಿದ್ದ. ಸ್ಥಳದಲ್ಲಿ ಠಿಕಾಣಿ ಹೂಡಿದ್ದ ಸ್ಥಳೀಯ ಪೊಲೀಸ್ ತುಕಡಿ ಮತ್ತು ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸರಿಗೆ ರಾತ್ರಿಯ ಚಳಿಯಿಂದ ರಕ್ಷಿಸಿಕೊಳ್ಳಲು ಕ್ಯಾಂಪ್ ಫೈರ್ ಹಾಕಿ ಕೊಡುವುದು ಕರಿಂಬನ ಮುಖ್ಯ ಕೆಲಸವಾಗಿತ್ತು. ಸುರಂಗದಲ್ಲಿ ಸಿಕ್ಕಿಹಾಕಿಕೊಂಡಿದ್ದ ಕಾರ್ಮಿಕರ ಸಂಬಂಧಿಕರಿಗೆ ಊಟ, ನೀರು ಕೊಟ್ಟು ಮಲಗಲು ಜಾಗ ತೋರಿಸುತ್ತಿದ್ದ ಸಮೀರ್, ಇದನ್ನೆಲ್ಲಾ ಯಾವ ಫಲಾಪೇಕ್ಷೆ ಇಲ್ಲದೆ ಮಾಡುತ್ತಿದ್ದ. ತಮ್ಮವರು ಸುರಕ್ಷಿತವಾಗಿ ಹೊರಗೆ ಬರುತ್ತಾರೋ ಇಲ್ಲವೋ ಎಂಬ ಆತಂಕದಲ್ಲಿದ್ದವರನ್ನು ಸಮಾಧಾನಪಡಿಸುತ್ತಿದ್ದ.

'ನೀನು ಇಲ್ಲಿಯ ಕೆಲಸಗಾರನೇ?' ಎಂದು ಪತ್ರಕರ್ತರು ಕೇಳಿದ್ದಕ್ಕೆ, 'ಇಲ್ಲ, ನಾನು ಚಿಕ್ಕವನಿದ್ದಾಗ ನನ್ನ ಹಳ್ಳಿಯ ಬಳಿ ಬಸ್ ಅಪಘಾತವಾಗಿ ಒಳಗಿದ್ದವರೆಲ್ಲ ಗಾಯಗೊಂಡಿದ್ದರು. ದೊಡ್ಡವರೆಲ್ಲ ಗಾಯಾಳುಗಳನ್ನು ಉರುಳಿ ಬಿದ್ದ ಬಸ್‌ನಿಂದ ಹೊರತೆಗೆಯುವುದು, ಆಸ್ಪತ್ರೆಗೆ ಸಾಗಿಸುವುದು ಮಾಡುತ್ತಿದ್ದರು. ನಾನು ಚಿಕ್ಕವನಾಗಿದ್ದರಿಂದ ಅದನ್ನೆಲ್ಲ ಮಾಡಲಾಗುತ್ತಿರಲಿಲ್ಲ, ಆದ್ದರಿಂದ ಗಾಯಾಳುಗಳಿಗೆ ನೀರು ಹಂಚಿ ಸಮಾಧಾನಪಟ್ಟಿದ್ದೆ. ಈಗ ಸಹಾಯ ಮಾಡಲು ದೇವರೇ ಅವಕಾಶ ಒದಗಿಸಿಕೊಟ್ಟಿದ್ದಾನೆ. ಆದ್ದರಿಂದ ಇಲ್ಲಿಗೆ ಬಂದಿದ್ದೇನೆ' ಎಂದು ಉತ್ತರಿಸಿದ್ದ.

ಕರಿಂಬನ ಜೊತೆ ಇನ್ನೂ ಐದಾರು ಜನ ಇದೇ ಕೆಲಸ ಮಾಡುತ್ತಿದ್ದುದನ್ನು ಸ್ಥಳೀಯ ಮಾಧ್ಯಮಗಳು ವರದಿ ಮಾಡಿದ್ದವು. 'ಹನ್ಸ್ ಫೌಂಡೇಷನ್' ಎಂಬ ಸಾಮಾಜಿಕ ಸಂಘಟನೆ ರಕ್ಷಣಾ ಕಾರ್ಯದಲ್ಲಿ ನಿರತರಾಗಿದ್ದ ಎಲ್ಲರಿಗೆ ಮತ್ತು ಕಾರ್ಮಿಕರ ಸಂಬಂಧಿಕರಿಗೆ ಉಚಿತ ಊಟ, ಬಟ್ಟೆ, ಕಂಬಳಿ ವ್ಯವಸ್ಥೆ ಮಾಡಿತ್ತು. ಪ್ರತಿ ದಿನ 2000 ಜನಕ್ಕೆ ಉಚಿತ ಊಟದ ವ್ಯವಸ್ಥೆ ಇತ್ತು.